## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 3019/2021

ಚಾಸಾ-1 ಫ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 03-03-2026

| | | |
|---|---|---|
| ಹೆಸರು | : | ಶಿವಯೋಗಪ್ಪ |
| ತಂದೆಯ ಹೆಸರು | : | ಶರಣಪ್ಪ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಹಾವನೂರು |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 2, 3 ಪರಿಚಯ ಇರುತ್ತಾರೆ. ಆರೋಪಿತರು ಅಣ್ಣ ಮತ್ತು ಅಣ್ಣನ ಮಗ ಇರುತ್ತಾರೆ.

ದಿಃ 25-06-2021 ರಂದು ಗುಲ್ಬರ್ಗಾದಿಂದ ಬರುತ್ತಿರುವಾಗ ಚಾರಕೀನ ಹಳ್ಳದ ಹತ್ತಿರ ರಾತ್ರಿ 7 ರ ಸುಮಾರಿಗೆ 1 ಮತ್ತು 2 ನೇ ಆರೋಪಿತರು ಕುಳಿತಿದ್ದರು. ಇಬ್ಬರು ಬಂದು ನನಗೆ ದಾರಿ ಅಡ್ಡಗಟ್ಟಿ ಮನೆ ನಂ. 72 /ಇ ಇದು ನನ್ನ ಮನೆಯಿದೆ, ಅದನ್ನು ಆರೋಪಿತನ ಹೆಸರು ಮಾಡಿಕೊಂಡು ನಿನ್ನ ಹೆಸರಿಗೆ ಮಾಡು ಅಂತಿಯ ಅಂತ ಜಗಳ ತೆಗೆದಿರುತ್ತಾರೆ. ಆರೋಪಿ ಮನೆ ನಂ. 68/ಎ ಇರುತ್ತದೆ. ಅದನ್ನು ಕಟ್ಟಡ ತಡೆಯಲು ಪಂಚಾಯತಿಗೆ ಅರ್ಜಿ ಕೊಡುತ್ತೀಯಾ ಅಂತ ಹೇಳಿ ಬಡಿಗೆಯಿಂದ ನನ್ನ ಬಲಗೈ ಮುಂಗೈ ಮೇಲೆ ಹೊಡೆದಿರುತ್ತಾರೆ. 2 ನೇ ಆರೋಪಿ ನನ್ನ ಕಾಲಿನ ಕಿರುಬೆರಳಿನ ಮೇಲೆ ರಕ್ತಗಾಯ ಮಾಡಿರುತ್ತಾನೆ. ಇನ್ನೊಂದು ಸಾರಿ ಮನೆ ನನ್ನ ಹೆಸರಿಗೆ ಮಾಡು ಅಂತ ಕೇಳಿದರೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ.

ನಾನು ಕಲಬುರಗಿ ಆಸ್ಪತ್ರೆಗೆ ಹೋಗಿ MLC ಮಾಡಿ ಚಿಕಿತ್ಸೆ ಪಡೆದಿರುತ್ತೇನೆ. ಆನಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ಸಾಕ್ಷಿಗೆ ದೂರಿನ ಪ್ರತಿ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-**2** ಎಂದು ಸಾಕ್ಷಿ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಬಡಿಗೆಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು**.**ಮಾ**. 1** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀಸವಾಲು ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ